**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ,**

**ಬ್ಯಾಡಗಿ.**

**ಸಿ.ಸಿ. ನಂ. 348/2025.**

**ಸಿ ಡಬ್ಲ್ಯೂ: 18**

**ಪಿ ಡಬ್ಲ್ಯೂ: 5**

| | | |
|---|---|---|
| ಹೆಸರು | : | ಡಾ. ಪಿ.ಲೀಲಾ |
| ಗಂಡನ ಹೆಸರು | : | ಡಾ.ಬ್ರಹ್ಮಾನಂದ |
| ವಯಸ್ಸು | : | 53 ವರ್ಷ |
| ಉದ್ಯೋಗ | : | ಹಿರಿಯ ವೈದ್ಯಾಧಿಕಾರಿ |
| ವಾಸಸ್ಥಳ | : | ಹಾವೇರಿ |

**ದಿನಾಂಕಃ 27-02-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿ ರವರಿಂದಃ**

ನಾನು ಹಾವೇರಿ ಜಿಲ್ಲಾ ಆಸ್ಪತ್ರೆಯಲ್ಲಿ ಜೂನ್-2013 ರಿಂದ ಇಲ್ಲಿಯವರೆಗೆ ಹಿರಿಯ ವೈದ್ಯಾಧಿಕಾರಿ ಅಂತಾ ಕೆಲಸ ಮಾಡುತ್ತಿದ್ದೇನೆ. ದಿನಾಂಕಃ 26.08.2021 ರಂದು ಮದ್ಯಾಹ್ನ 03.30 ಕ್ಕೆ ಮೃತ ಹೇಮನಗೌಡ ಪಾಟೀಲರವರನ್ನು ಅವರ ಮಗ ಜೀವರಾಜ ಪಾಟೀಲರವರು ಹಾವೇರಿ ಆಸ್ಪತ್ರೆಗೆ ಹಲ್ಲೇಯ ಹಿನ್ನೇಲೆಯಲ್ಲಿ ಆದ ಗಾಯಕ್ಕೆ ಚಿಕಿತ್ಸೆಗೆ ಹಾಜರಾಗಿದ್ದರು ಅವನ್ನು ಪರೀಕ್ಷಿಸಿದಾಗ ಈ ಕೆಳಕಂಡ ಗಾಯಗಳು ಕಂಡು ಬಂದವು.

1) Linen abrasion over left check bone
   3 cm x 0.5cmx0.1cm.

2) Abrasion over left check bone 1cmx0.5cm x 0.2cm.

3) Tenderness over both elbows, front of chest and abdomen.

ಎದೆಭಾಗದ ಎಕ್ಸ ರೇ ಮಾಡಿದಾಗ ಯಾವುದೇ ಮೂಳೆ ಮುರಿತ ಕಂಡು ಬಂದಿಲ್ಲ. ಹೊಟ್ಟೆಯ ಸಿಟಿ ಸ್ಕ್ಯಾನ್ ನಲ್ಲಿ ಎಕ್ಸ ರೇ ಮಾಡಿದಾಗ ಯಾವುದೇ ಹೊಡೆದಾಟದ ಗುರುತುಗಳು ಕಂಡು ಬಂದಿಲ್ಲ. Above Said injuries simple in nature.

ಮೇಲೆ ಹೇಳಿದ ಗಾಯಗಳು ಒರಟಾದ ವಸ್ತುವಿನಿಂದ ಹೊಡೆದಾಗ ಆಗುವ ಸಂಭವ ಇರುತ್ತದೆ. ನಾನು ಈ ಕುರಿತು ಗಾಯದ ಪ್ರಮಾಣ ಪತ್ರ ನೀಡಿದ್ದು ಅದನ್ನು ನಿಪಿ-22 ಎಂದು ಗುರುತಿಸಲಾಯಿತು. ಎಕ್ಸ್-ರೇ ವನ್ನು ನಿಪಿ-23 ಎಂದು ಗುರುತಿಸಲಾಯಿತು. ಸಿಟಿ ಸ್ಕ್ಯಾನ್ ನ್ನು ನಿಪಿ-24 ಎಂದು ಗುರುತಿಸಲಾಯಿತು. ಎಂ.ಎಲ್.ಸಿ ಎಕ್ಸಟ್ರ್ಯಾಕ್ಟನ್ನು ನಿಪಿ-25 ಎಂದು ಗುರುತಿಸಲಾಯಿತು. ಪೋಲಿಸರ ಮುಂದೆ ನೀಡಿದ ಹೇಳಿಕೆಯನ್ನು ನಿಪಿ-26 ಎಂದು, ಸಾಕ್ಷಿಯ ಸಹಿಯನ್ನು ನಿಪಿ-26 ಎ ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ 1 ರಿಂದ 8 ನೇದ್ದವರ ಪರ ಶ್ರೀ ವಿ.ಎಂ.ಎನ್ ವಕೀಲರಿಂದಃ**

ಮೃತ ಹೇಮನಗೌಡರವರು ಓಪಿಡಿ ಆಧಾರದ ಮೇಲೆ ಹೊರರೋಗಿಯಾಗಿ ತುರ್ತು ಚಿಕಿತ್ಸಾ ಘಟಕದಲ್ಲಿ ಚಿಕಿತ್ಸೆ ಪಡೆದಿರುತ್ತಾರೆ. ಸ್ಕ್ಯಾನ್ ಮಾಡಿದಾಗ ಯಾವುದೇ ಗಾಯ ಕಂಡು ಬಂದಿಲ್ಲ ಎಂದರೆ ಸರಿ. ಮೇಲೆ ಹೇಳಿದ ಗಾಯಗಳು ಹೊಲದಲ್ಲಿ ಕೆಲಸ ಮಾಡುವಾಗ, ಎಡವಿ ಬಿದ್ದಾಗ ಆಗುವ ಸಂಭವ ಇರದೆ ಎಂದರೆ ಸರಿ. ನಾನು ಮೃತ ಹೇಮನಗೌಡರಿಗೆ ಯಾವುದೇ ಚಿಕಿತ್ಸೆ ನೀಡದೇ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

9 ರಿಂದ 11 ಆರೋಪಿ ಪರ ವಕೀಲರು 1 ರಿಂದ 8 ಆರೋಪಿತರ ಪರ ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳುತ್ತಾರೆ.

**ಮರು ವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೆ.ಸರಿ ಇದೆ.

**Sd/-**

ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಲಯ ಬ್ಯಾಡಗಿ.